# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಫಲಾನುಭವಿ ಆಧಾರಿತ ಯೋಜನೆಗಳನ್ನು ಅನುಷ್ಠಾನಗೊಳಿಸಲು SBI ಬ್ಯಾಂಕ್‌ನಲ್ಲಿ ವ್ಯಾಲೆಟ್ ಖಾತೆ ತರೆದು ಯೋಜನೆಗಳ ಸವಲತ್ತನ್ನು ಡಿಬಿಟಿ ಪೋರ್ಟಲ್ ಮುಖಾಂತರ ವರ್ಗಾಯಿಸುವ ಕುರಿತು.

**ಓದಲಾಗಿದೆ:-**
1. ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ:ಆಇ 37 ಟಿಎಆರ್ 2021 ದಿನಾಂಕ:26.07.2021.
2. ಅಧಿಸೂಚನೆ ಸಂಖ್ಯೆ:ಸಿಆಸುಇ 126 ಇಜಿಎಂ 2020, ದಿನಾಂಕ:08.11.2021.
3. ದಿನಾಂಕ:08.11.2021 ರಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
4. ಸರ್ಕಾರದ ಪತ್ರ ಸಂ: ಸಿಆಸುಇ 64 ಪಿಆರ್‌ಜೆ 2021, ದಿನಾಂಕ:24.11.2021.
5. ಅಧಸೂಚನೆ ಸಂಖ್ಯೆ: ಸಿಆಸುಇ 31 ಪಿಆರ್‌ಜೆ 2022, ದಿನಾಂಕ:21.03.2022.
6. ವ್ಯವಸ್ಥಾಪಕ ನಿರ್ದೇಶಕರು, ಕ.ವೀ.ಲಿ.ಅ.ನಿ ಇವರ ಪ್ರಸ್ತಾವನೆ ಸಂಖ್ಯೆ:ಕ.ವಿ.ಲಿ.ಅ.ನಿ/ಸಿಆರ್-43/140/2021-2022, ದಿನಾಂಕ:19.02.2022.
7. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 232 ವೆಚ್ಚ-3/2021, ದಿನಾಂಕ:29.03.2022.

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸುತ್ತೋಲೆಯಲ್ಲಿ ಎಲ್ಲಾ ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳಿಗೆ ಸಂಬಂಧಿಸಿದಂತೆ ಸಿಆಸುಇ(ಇ-ಆಡಳಿತ) ಇಲಾಖೆಯೊಂದಿಗೆ ಸರ್ಕಾರದ ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆ ಮೂಲಕ ಅನುಷ್ಠಾನಗೊಳಿಸಲು ಕಾರ್ಯವಿಧಾನವನ್ನು ರೂಪಿಸಿ ಮತ್ತು ಈ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸಲು ಸಮಯ ಸೂಚನೆ ನಿಗಧಿಪಡಿಸುವವರೆಗೆ ಈ ಯೋಜನೆಗಳಿಗೆ ಸಂಬಂಧಿಸಿದಂತೆ ಖಜಾನೆಯಲ್ಲಿ ಸಲ್ಲಿಸುವ ಬಿಲ್ಲುಗಳನ್ನು ದಿನಾಂಕ:01.09.2021 ರಿಂದ ಅಂಗೀಕರಿಸಲಾಗುವುದಿಲ್ಲ. ಸಿಆಸುಇ(ಇ-ಆಡಳಿತ) ಇಲಾಖೆಯಿಂದ ಪ್ರತಿ ಯೋಜನೆಗೆ ಸಂಬಂಧಿಸಿದಂತೆ ವರದಿ ಸ್ವೀಕೃತವಾದ ನಂತರ ಬಿಲ್ಲುಗಳನ್ನು ಮಾತ್ರ ಖಜಾನೆಯಲ್ಲಿ ಅಂಗೀಕರಿಸಲಾಗುವುದು. ಆದುದರಿಂದ ಎಲ್ಲಾ ಇಲಾಖಾ ಕಾರ್ಯದರ್ಶಿಗಳು ತಮ್ಮ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆ, ನಿಗಮ, ಮಂಡಳಿ, ಸೂಸೈಟಿಗಳಿಗೆ ತಾವು ಅನುಷ್ಠಾನಗೊಳಿಸುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳಿಗೆ ಸಿಆಸುಇ (ಇ-ಆಡಳಿತ) ಇಲಾಖೆಯೊಂದಿಗೆ ಸರ್ಕಾರದ ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆ (DBT Platform) ಮೂಲಕ ಅನುಷ್ಠಾನಗೊಳಿಸಲು ಕಾರ್ಯವಿಧಾನವನ್ನು ರೂಪಿಸಿ ಮತ್ತು ಈ ಕಾರ್ಯವಿಧಾನವನ್ನು ಅನುಷ್ಠಾಗೊಳಿಸಲು ಸಮಯ ಸೂಚನೆ ನಿಗಧಿಪಡಿಸಲು ಸೂಚಿಸಲಾಗಿದೆ.

01/04/22

2...

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರದ ಎಲ್ಲಾ ಇಲಾಖೆ, ನಿಗಮ, ಮಂಡಳಿ ಹಾಗೂ ಸ್ವಾಯತ್ತ ಸಂಸ್ಥೆಗಳು ಸರ್ಕಾರದ ಸೇವೆ, ಸೌಲಭ್ಯ ಬಯಸುವ ರಾಜ್ಯದ ನಿವಾಸಿ ನಾಗರೀಕರ ಕುಟುಂಬ ಗುರುತಿನ ಸಂಖ್ಯೆಯನ್ನು (ಕುಟುಂಬ ಪಡಿತರ ಚೀಟಿ ಸಂಖ್ಯೆ) ಕಡ್ಡಾಯವಾಗಿ ಪಡೆಯಲು ಆದೇಶಿಸಿದೆ. ಈ ಆದೇಶದಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ನೇತೃತ್ವದ ಚಾಲನಾ ಸಮಿತಿಯ ಒಪ್ಪಿಗೆ ಪಡೆದು ಅಧಿಸೂಚನೆ ಮುಖಾಂತರ ಸರ್ಕಾರದ ಎಲ್ಲಾ ಇಲಾಖೆ ನಿಗಮ, ಮಂಡಳಿ ಹಾಗೂ ಸ್ವಾಯತ್ತ ಸಂಸ್ಥೆಗಳು ಕುಟುಂಬ ಯೋಜನೆಗೆ ಒಳಪಡುವಂತೆ ಅಧಿಸೂಚಿಸಬಹುದಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ)ಯು ರಾಜ್ಯ ಸರ್ಕಾರದ ಇಲಾಖೆ/ನಿಗಮ,/ಮಂಡಳಿ ಅಥವಾ ಸ್ವಾಯತ್ತ ಸಂಸ್ಥೆಗಳಿಗೆ ಅನುಕೂಲವಾಗುವಂತೆ ಕುಟುಂಬ ಗುರುತಿನ ದತ್ತ ಸಂಚಯದೊಂದಿಗೆ ಸಂಯೋಜನೆ ಹೊಂದುವ ಸಂಬಂಧ ಪಾಲಿಸಬೇಕಾದ ಕಾರ್ಯವಿಧಾನ ಹಾಗೂ ಪ್ರಕ್ರಿಯೆಗಳನ್ನು ಕಾಲಕಾಲಕ್ಕೆ ಮಾರ್ಗಸೂಚಿ/ನಿರ್ದೇಶನ/ಸುತ್ತೋಲೆ/ಸರ್ಕಾರಿ ಆದೇಶ/ಅಧಿಸೂಚನೆಯ ಮೂಲಕ ಹೊರಡಿಸುತ್ತದೆ. ಇ-ಆಡಳಿತ ಕೇಂದ್ರವು ಸದರಿ ಕಾರ್ಯವಿಧಾನ ಹಾಗೂ ಪ್ರಕ್ರಿಯೆಗಳನ್ನು ತಪ್ಪದೇ ಪಾಲಿಸಲು ಸೂಚಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ:08.11.2021ರಲ್ಲಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಎಲ್ಲಾ ನಿಗಮಗಳ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರುಗಳ ಸಭೆಯಲ್ಲಿ ಕೈಗೊಂಡ ನಿರ್ಣಯದ ಪ್ರಕಾರ 2021-22 ರಲ್ಲಿ ಎಲ್ಲಾ ನಿಗಮಗಳು ಅನುಷ್ಠಾನಗೊಳಿಸುತ್ತಿರುವ ಅರಿವು ನವೀಕರಣ ಯೋಜನೆಯನ್ನು ಸುವಿಧಾ ತಂತ್ರಾಂಶದ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಅದರಡಿಯಲ್ಲಿ ಅನುಷ್ಠಾನಗೊಳಿಸುವುದೆಂದು ನಿರ್ಣಯಿಸಲಾಗಿದೆ. ಸುವಿಧಾ ತಂತ್ರಾಂಶದಲ್ಲಿ ಆಧಾರ ಜೋಡಣೆ ಆಗಿದ್ದು, DBT ಮೂಲಕ ಫಲಾನುಭವಿಯ ಆಧಾರ ಖಾತೆಗೆ ನೇರವಾಗಿ ಸವಲತ್ತು ವರ್ಗಾಯಿಸಲು ಅವಕಾಶವಿರುತ್ತದೆ. ಆದರೆ, ಆರ್ಥಿಕ ವರ್ಷ 2022-23 ರಲ್ಲಿ ಕಡ್ಡಾಯವಾಗಿ ಎಲ್ಲಾ ನಿಗಮಗಳು ಎಲ್ಲಾ ಯೋಜನೆಗಳನ್ನು ಸುವಿಧಾ ತಂತ್ರಾಂಶದ ಮೂಲಕ ಫಲಾನುಭವಿಯ ಆಧಾರ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ(DBT) ಮೂಲಕ ಸವಲತ್ತು ವರ್ಗಾಯಿಸಲು ಅನುಷ್ಠಾನಗೊಳಿಸಲು ನಿರ್ಣಯಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದನ್ವಯ ಎಲ್ಲಾ ನಿಗಮ/ಮಂಡಳಿ/ನಿಯಮಿತ ಹಾಗೂ ಸೊಸೈಟಿಗಳು ಫಲಾನುಭವಿ ಆಧಾರಿತ ಯೋಜನೆಗಳನ್ನು ಅನುಷ್ಠಾನಗೊಳಿಸಲು SBI ಬ್ಯಾಂಕ್‌ನಲ್ಲಿ ಪ್ರತ್ಯೇಕ ಖಾತೆ ತೆರೆಯಲು ಹಾಗೂ ಯೋಜನೆಗಳಿಗೆ ಸಂಬಂಧಿಸಿದಂತೆ ಡಿ.ಬಿ.ಟಿ ಮಾಡುವಾಗ ಅಷ್ಟು ಮೊತ್ತವನ್ನು ಮಾತ್ರ SBI ವ್ಯಾಲೆಟ್ ಖಾತೆಯಲ್ಲಿ ಜಮೆ ಮಾಡಿ ಫಲಾನುಭವಿಗಳಿಗೆ ನೇರ ಪಾವತಿ ಮಾಡಲು ಹಾಗೂ ಈ ಖಾತೆಗಳ ವಿವರಗಳನ್ನು ಸಹ ಖಜಾನೆಯಲ್ಲಿರುವ NTT ಮಾಡ್ಯೂಲ್‌ನಲ್ಲಿ ದಾಖಲಿಸುವ ಹಾಗೂ ಯಾವುದೇ ಇತರೆ ಮೊತ್ತವನ್ನು ಈ ಖಾತೆಗೆ ಜಮೆ ಮಾಡದಿರುವ ಷರತ್ತಿಗೊಳಪಟ್ಟಿರುತ್ತದೆಂದು ತಿಳಿಸಿರುತ್ತಾರೆ.

01/04/22